**ಸಿ.ಡಬ್ಲೂ-6 / ಪಿ.ಡಬ್ಲೂ-5**

**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 1197/2019**

| | | |
|---|---|---|
| ಸಾಕ್ಷಿದಾರರ ಹೆಸರು | : | ಚಂದ್ರಶೇಖರ್ |
| ತಂದೆಯ ಹೆಸರು | : | ಸಿದ್ದನಾಯಕ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಕಂಪ್ಯೂಟರ್ ಆಪರೇಟರ್ |
| ವಾಸಸ್ಥಳ | : | ಹುರಾ, ನಂಜನಗೂಡು ತಾ. |

**ಸಾಕ್ಷಿಯನ್ನು ದಿನಾಂಕಃ 18.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ-1 ಮತ್ತು 2 ನನ್ನ ತಂದೆ-ತಾಯಿಗಳು. ದಿನಾಂಕ 25.04.2019 ರಂದು ನಾನು ಮನೆಯಲ್ಲಿರುವಾಗ ಸುಮಾರು 6.00-6.30 ಗಂಟೆ ಸಮಯದಲ್ಲಿ ನನ್ನ ತಂದೆ ಮನೆಗೆ ಬಂದು ಚಾಸಾ-2 ರವರಿಗೆ ಹೊಡೆದಿರುತ್ತಾರೆ, ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕೆಂದು ಹೇಳಿದ್ದರಿಂದ ನಾನು ನನ್ನ ತಂದೆ-ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಏಕೆ ಹಲ್ಲೆ ಮಾಡಿರುತ್ತಾರೆಂದು ನನ್ನ ತಾಯಿಯನ್ನು ಕೇಳಿದಾಗ ನಮ್ಮ ಜಮೀನಿನಲ್ಲಿ ಕಾಳು ಬಿತ್ತನೆಗೆ ಹೋದಾಗ ಆರೋಪಿಗಳು ನಮ್ಮ ಜಮೀನಿಗೆ ಬಂದು ನನ್ನ ತಾಯಿಗೆ ಬೋಳಿಮಗಳೆ ಜಮೀನಿಂದ ಈಚೆಗೆ ಬಾ ಎಂದು ಬೈದು, ದೊಣ್ಣೆಯಿಂದ ಕೈಗೆ ಹೊಡೆದಿರುತ್ತಾರೆಂದು ತಿಳಿಸಿರುತ್ತಾರೆ. ನಾವು ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ಬಂದು ನಮ್ಮ ಹೇಳಿಕೆ ಪಡೆದಿರುತ್ತಾರೆ. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಗಳ ಪೈಕಿ ಈ ದಿವಸ 1 ಮತ್ತು 2 ನೇ ಆರೋಪಿಗಳು ನ್ಯಾಯಾಲಯದಲ್ಲಿರುತ್ತಾರೆ. ಕಾಡಯ್ಯ ಗೈರು ಹಾಜರಿರುತ್ತಾರೆ.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಎ.ಪಿ.ಎಂ.ಬಿ ವಕೀಲರಿಂದಃ**

ಸರ್ವೆ ನಂ. 92/1 ರ ಜಮೀನಿಗೆ ಸಂಬಂಧಿಸಿದಂತೆ ನಾನು ಮತ್ತು ನನ್ನ ಸಹೋದರ ಆರೋಪಿಗಳ ವಿರುದ್ದ 2017 ರಲ್ಲಿ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿ. ಒಂದೇ ಪಹಣಿ ಪತ್ರಿಕೆಯಲ್ಲಿ ನಮ್ಮ ಮತ್ತು ಕಾಡಯ್ಯರವರ ಹೆಸರು ಇರುತ್ತದೆ ಎಂದರೆ ಸರಿ. ನಮ್ಮ ಮತ್ತು ಕಾಡಯ್ಯರವರ ಜಮೀನು ಅಕ್ಕ-ಪಕ್ಕದಲ್ಲಿರುತ್ತವೆ ಎಂದರೆ ಸರಿ. ನಾವು ಸಿವಿಲ್ ವ್ಯಾಜ್ಯ ದಾಖಲಿಸಿದ ದಿನಾಂಕದಿಂದಲೂ ಕಾಡಯ್ಯರವರಿಗೆ ಅವರ ಜಮೀನಿನಲ್ಲಿ ವ್ಯವಸಾಯ ಮಾಡಲು ಅಡ್ಡಿಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಜಮೀನಿಗೆ ಸಂಬಂಧಿಸಿದಂತೆ ನಿರ್ಬಂಧಕಾಜ್ಞೆ ಪಡೆದು ಕಾಡಯ್ಯರವರ ಜಮೀನನ್ನು ಉಳುಮೆ ಮಾಡಲು ತೊಂದರೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. 3 ನೇ ಆರೋಪಿ ಬೆಂಗಳೂರಿನಲ್ಲಿ ವಾಸವಿರುತ್ತಾರೆ ಎಂದರೆ ಬೆಂಗಳೂರಿನಲ್ಲೂ ಮತ್ತು ಊರಿನಲ್ಲೂ ವಾಸ ಮಾಡುತ್ತಾರೆ. ನನ್ನ ತಾಯಿ ಪೊಲೀಸರಿಗೆ ಹೇಳಿಕೆ ಕೊಟ್ಟಾಗ ನಾನು ಕೂಡ ಅಲ್ಲಿಯೇ ಇದ್ದೆ ಎಂದರೆ ನನ್ನ ತಂದೆ ಇದ್ದರು. ನಾನು ಹೇಳಿದಂತೆ ಯಾವುದೇ ಗಲಾಟೆ ನಡೆಯದಿದ್ದರೂ ನಾನೇ ಉದ್ದೇಶಪೂರ್ವಕವಾಗಿ ನನ್ನ ತಾಯಿಯನ್ನು ಆಸ್ಪತ್ರೆಗೆ ಸೇರಿಸಿ, ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ದಾಖಲಿಸಿರುವ ಸಿವಿಲ್ ಪ್ರಕರಣಕ್ಕೆ ಅನುಕೂಲವಾಗಲೆಂದು ನನ್ನ ತಾಯಿ ಮೂಲಕ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಸಿವಿಲ್ ಪ್ರಕರಣದಲ್ಲಿ ನಾವು ತಾತ್ಕಾಲಿಕ ನಿರ್ಬಂಧಕಾಜ್ಞೆಗಾಗಿ ಸಲ್ಲಿಸಿದ್ದ ಅರ್ಜಿ ವಜಾ ಆದ ನಂತರ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಾಯಿ ಪೊಲೀಸರಿಗೆ ಹೇಳಿಕೆ ನೀಡುವಾಗ ನಾನು ಕೂಡ ಜೊತೆಯಲ್ಲಿದ್ದೆ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

ಸಹಿ/–

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ನಂಜನಗೂಡು.**